ನಿವೇದನೆ

# ಮಹಿಳಾ ಸುರಕ್ಷತೆ: ಕೆಲವು ಪ್ರಶ್ನೆಗಳು

ಮಹಿಳೆಯರ ಪಾಲಿಗೆ ಭಾರತ ವಿಶ್ವದಲ್ಲೇ ಅತ್ಯಂತ ಅಪಾಯಕಾರಿ ದೇಶ ಎನ್ನುವ 'ಥಾಮಸ್ ರಾಯಿಟರ್ಸ್ ಪ್ರತಿಷ್ಠಾನದ'ದ ಸಮೀಕ್ಷಾ ವರದಿಯನ್ನು ಎರಡು ಕಾರಣಗಳಿಗಾಗಿ ಗಮನಿಸಬೇಕು. ಒಂದು, ಪಾಶ್ಚಿಮಾತ್ಯ ದೇಶಗಳು ಭಾರತವನ್ನು ಯಾವ ಕನ್ನಡಕದಲ್ಲಿ ನೋಡುತ್ತವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು. ಎರಡನೆಯದು, ಇಂಥ ಸಮೀಕ್ಷೆಗಳನ್ನು ನಾವು ಹೇಗೆ ನೋಡಬೇಕು ಎನ್ನುವುದಕ್ಕಾಗಿ. ರಾಷ್ಟ್ರೀಯ ಮಹಿಳಾ ಆಯೋಗ ಸಮೀಕ್ಷಾ ವರದಿಯನ್ನು ನಿರಾಕರಿಸಿದೆ. ಈ ನಿರಾಕರಣೆಗೆ ಕಾರಣಗಳೂ ಇವೆ. ಮಹಿಳೆಯರಿಗೆ ಮುಕ್ತವಾಗಿ ಮಾತನಾಡಲು ಅವಕಾಶವೇ ಇಲ್ಲದ ದೇಶಗಳು ಹೆಣ್ಣಿನ ಸುರಕ್ಷತೆಗೆ ಸಂಬಂಧಿಸಿದಂತೆ ಭಾರತಕ್ಕಿಂತಲೂ ಉತ್ತಮ ಪರಿಸ್ಥಿತಿಯಲ್ಲಿವೆ ಎಂದು ನಂಬುವುದು ಕಷ್ಟ. ಅಂತೆಯೇ ಮಹಿಳೆಯರ ಸಮಸ್ಯೆಗಳ ಕುರಿತಂತೆ ವಿಶ್ವದ ವಿವಿಧ ಭಾಗಗಳಲ್ಲಿನ 550 ಮಂದಿಯ ಅಭಿಪ್ರಾಯಗಳನ್ನು ಪಡೆದು ಪಟ್ಟಿಯನ್ನು ರೂಪಿಸಿರುವುದೂ ಪ್ರಶ್ನಾರ್ಹವೇ.

ಲಿಂಗ ತಾರತಮ್ಯ, ಲೈಂಗಿಕ ಹಿಂಸಾಚಾರ, ಮಾನವ ಕಳ್ಳಸಾಗಣೆ ಸೇರಿದಂತೆ ಅನೇಕ ಸಂಗತಿಗಳನ್ನು ಅಧ್ಯಯನದಲ್ಲಿ ಬಳಸಿಕೊಂಡಿರುವ ಥಾಮಸ್ ಪ್ರತಿಷ್ಠಾನ, ಮಹಿಳೆಯರ ಪಾಲಿಗೆ ಭಾರತ ಅತ್ಯಂತ ಅಪಾಯಕಾರಿ ದೇಶ ಎನ್ನುವ ವರದಿಯನ್ನು ಪ್ರಕಟಿಸಿದೆ. ಅಫ್ಘಾನಿಸ್ತಾನ, ಸಿರಿಯಾ, ಸೋಮಾಲಿಯಾ ಹಾಗೂ ಸೌದಿ ಅರೇಬಿಯಾಗಳನ್ನು ಭಾರತದ ನಂತರ ಹೆಸರಿಸಲಾಗಿದೆ. ಸಮೀಕ್ಷೆಯ ಮಾನದಂಡಗಳನ್ನು ಪ್ರಶ್ನಿಸಿರುವ ಮಹಿಳಾ ಆಯೋಗ, ಈ ವರದಿ ಭಾರತವನ್ನು ಪ್ರತಿನಿಧಿಸಲು ಸಾಧ್ಯವೇ ಇಲ್ಲ ಎಂದು ಹೇಳಿದೆ. ಭಾರತದಲ್ಲಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಜಾಗೃತಿಯಿದೆ ಎಂದು ಹೇಳಿರುವ ಆಯೋಗದ ಅಧ್ಯಕ್ಷರು, ಮಹಿಳಾ ಜಾಗೃತಿ–ಸುರಕ್ಷತೆಗೆ ಸಂಬಂಧಿಸಿದಂತೆ ಭಾರತವನ್ನು ವಿಶ್ವದಲ್ಲಿ ಮುಂಚೂಣಿಯಲ್ಲಿ ಗುರ್ತಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಮನೇಕಾ ಗಾಂಧಿ ಕೂಡ ಸಮೀಕ್ಷೆಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ್ದಾರೆ.

ಸಮೀಕ್ಷೆಯ ಬಗ್ಗೆ ಮಹಿಳಾ ಆಯೋಗ ಹಾಗೂ ಕೇಂದ್ರ ಸಚಿವರ ಪ್ರಶ್ನೆಗಳು ಸರಿಯಾಗಿಯೇ ಇವೆ. ಭಾರತದ ಕುರಿತ ಯೂರೋಪಿಯನ್ನರ ಬದಲಾಗದ ದೃಷ್ಟಿಕೋನವನ್ನು ಈ ಸಮೀಕ್ಷೆ ಸೂಚಿಸುವಂತಿದೆ. ಯುರೋಪಿನ ಮಾಧ್ಯಮಗಳಲ್ಲಿನ ವರದಿಗಳನ್ನು ನೋಡಿದರೆ, ಅಲ್ಲಿನ ಮಹಿಳೆಯರ ಸ್ಥಿತಿಗತಿ ಭಾರತಕ್ಕಿಂತ ತೀರಾ ಭಿನ್ನವಾಗಿಯೇನೂ ಇಲ್ಲ. ದೇಶ– ಕಾಲ ಯಾವುದಾದರೂ ಮಹಿಳೆಯನ್ನು ಕಾಣುವ ಸಮಾಜದ ಮೂಲಭೂತ ದೃಷ್ಟಿಕೋನದಲ್ಲಿ ಯಾವ ಬದಲಾವಣೆಯೂ ಆಗದಿರುವುದನ್ನು ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ಸಾಮಾಜಿಕ ನೈತಿಕತೆಯ ಬಗ್ಗೆ ಮೂರನೆಯವರು ಮಾತನಾಡುವುದರ ಬಗ್ಗೆ ನಾವು ಆತಂಕಪಡಬೇಕಿಲ್ಲ. ಆದರೆ, ಥಾಮಸ್ ಪ್ರತಿಷ್ಠಾನದ ವರದಿಯನ್ನು ನಿರಾಕರಿಸುವ ನಾವು, ಭಾರತದಲ್ಲಿ ಹೆಣ್ಣುಮಕ್ಕಳು ಸುರಕ್ಷಿತವಾಗಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ನಿರಾಕರಿಸುವಂತಿಲ್ಲ.

ಹೆಣ್ಣುಮಕ್ಕಳ ಕುರಿತ ನಮ್ಮ ಮಾತುಗಳು ಬಹುತೇಕ ಸಂದರ್ಭಗಳಲ್ಲಿ ಭಾವನಾತ್ಮಕವಾಗಿರುತ್ತವೆ ಹಾಗೂ ಹೆಣ್ಣಿನ ಘನತೆಯನ್ನು ಕುರಿತದ್ದಾಗಿರುತ್ತವೆ. ಆದರೆ, ವಾಸ್ತವ ಪರಿಸ್ಥಿತಿ ಹೇಗಿದೆ? ಗಂಡುಮಕ್ಕಳಿಗಾಗಿ ಹಂಬಲಿಸುವ ಮನೋಭಾವ ಇನ್ನೂ ಬದಲಾಗಿಲ್ಲ. ಹೆಣ್ಣುಕೂಸುಗಳನ್ನು ಭ್ರೂಣದಲ್ಲಿಯೇ ಹೊಸಕಿಹಾಕುವ ಇಲ್ಲವೇ ಹುಟ್ಟಿದನಂತರ ಉಸಿರು ಕಟ್ಟಿಸುವ ಘಟನೆಗಳು ನಡೆಯುತ್ತಲೇ ಇವೆ. ಶಿಕ್ಷಣ ನೀಡುವುದರಲ್ಲಿ ಕೂಡ ಹೆಣ್ಣುಮಕ್ಕಳಿಗೆ ಎರಡನೇ ಆದ್ಯತೆ. ಗಂಡುಮಕ್ಕಳನ್ನು ವಾರಸುದಾರರನ್ನಾಗಿ ನೋಡಿದರೆ, ಹುಡುಗಿಯರನ್ನು ಬೇರೆ ಮನೆಗೆ ಸೇರಿದವರೆಂದೇ ಭಾವಿಸಲಾಗುತ್ತದೆ. ಸಾಮಾಜಿಕವಾಗಿ ಮಾತ್ರವಲ್ಲ, ಆರ್ಥಿಕವಾಗಿ ಕೂಡ ಹೆಚ್ಚಿನ ಹೆಣ್ಣುಮಕ್ಕಳು ಸ್ವಾವಲಂಬಿಗಳಾಗಿಲ್ಲ. ವರದಕ್ಷಿಣೆ ಹಿಂಸಾಚಾರ ಹಾಗೂ ಕೌಟುಂಬಿಕ ದೌರ್ಜನ್ಯಗಳು ನಡೆಯದ ಊರುಕೇರಿಗಳು ನಮ್ಮಲ್ಲೆಲ್ಲಿಯಾದರೂ ಇವೆಯೇ?

ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳ ಘಟನೆಗಳಂತೂ ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವ್ಯಾಖ್ಯಾನಗಳನ್ನೇ ಪುನರ್ ಅವಲೋಕಿಸಲು ಒತ್ತಾಯಿಸುವಂತಿವೆ. ಎಳೆಯ ಕಂದಮ್ಮಗಳ ಮೇಲಿನ ಅಮಾನುಷ ಅತ್ಯಾಚಾರಗಳು ನಿರಂತರವಾಗಿ ವರದಿಯಾಗುತ್ತಿವೆ. ಸಂಸ್ಕೃತಿ–ಧರ್ಮ ರಕ್ಷಣೆಯ ಕುರಿತು ಮಾತನಾಡುವವರೂ ಲೈಂಗಿಕ ಪ್ರಕರಣಗಳಲ್ಲಿ ಸುದ್ದಿಯಾಗುತ್ತಿರುವುದನ್ನು ನೋಡಿದರೆ ಸಂಸ್ಕೃತಿಯ ಬಗೆಗಿನ ನಮ್ಮ ಹೆಮ್ಮೆ ಅದೆಷ್ಟು ಬರಡು ಎನ್ನಿಸುತ್ತದೆ. ವಾಸ್ತವ ಹೀಗಿರುವಾಗ, ಥಾಮ್ಸನ್ ಪ್ರತಿಷ್ಠಾನದ ವರದಿ ಪೂರ್ವಾಗ್ರಹದಿಂದ ಕೂಡಿದೆ ಎಂದು ಹೇಳುವುದು ಹೇಗೆ? ನಿಜ, ಕೆಲವು ದೇಶಗಳಲ್ಲಿನ ಹೆಣ್ಣುಮಕ್ಕಳ ಪರಿಸ್ಥಿತಿ ಭಾರತಕ್ಕಿಂತಲೂ ಹೆಚ್ಚು ಶೋಚನೀಯವಾಗಿರಬಹುದು. ಹಾಗೆಂದು, ಪರಿಸ್ಥಿತಿ ನಮ್ಮಲ್ಲೇ ಚೆನ್ನಾಗಿದೆ ಎಂದು ಹೇಳುವುದು ಅಮಾನವೀಯ ಹಾಗೂ ಅನಾಗರಿಕ. ಥಾಮ್ಸನ್ ಪ್ರತಿಷ್ಠಾನದ ವರದಿ ನಮ್ಮಲ್ಲಿ ಹುಟ್ಟಿಸಬೇಕಾದುದು ಆಕ್ರೋಶವನ್ನಲ್ಲ, ಸ್ವವಿಮರ್ಶೆಯ ವಿವೇಕವನ್ನು.

■ ರಘುನಾಥ ಚ.ಹ.

ಎಳೆಯ ಕಂದಮ್ಮಗಳ ಮೇಲಿನ ಅಮಾನುಷ ಅತ್ಯಾಚಾರಗಳು ನಿರಂತರವಾಗಿ ವರದಿಯಾಗುತ್ತಿವೆ. ಸಂಸ್ಕೃತಿ–ಧರ್ಮ ರಕ್ಷಣೆಯ ಕುರಿತು ಮಾತನಾಡುವವರೂ ಲೈಂಗಿಕ ಪ್ರಕರಣಗಳಲ್ಲಿ ಸುದ್ದಿಯಾಗುತ್ತಿರುವುದನ್ನು ನೋಡಿದರೆ ಸಂಸ್ಕೃತಿಯ ಬಗೆಗಿನ ನಮ್ಮ ಹೆಮ್ಮೆ ಅದೆಷ್ಟು ಬರಡು ಎನ್ನಿಸುತ್ತದೆ.



ಈಶ್ವರ್